# ಸಾವು ಗೆದ್ದ ಜಾಕಿ



ಜಾಕಿ ಚಾನ್ ಮತ್ತೆ ಸುದ್ದಿಯಲ್ಲಿದ್ದಾನೆ. ಹಾಲಿವುಡ್‌ನ ಅತಿದೊಡ್ಡ 'ಬ್ಲಾಕ್‌ಬಸ್ಟರ್' ಸಿನಿಮಾಗಳಲ್ಲಿ ಒಂದಾದ 'ಫಾಸ್ಟ್ ಆ್ಯಂಡ್ ಫ್ಯೂರಿಯಸ್' ಖ್ಯಾತಿಯ ಜಾನ್ ಸೆನಾ, ಜಾಕಿಯನ್ನು ಹಾಡಿ ಹೊಗಳಿರುವುದೇ ದೊಡ್ಡ ಸುದ್ದಿ. ಹಾಲಿವುಡ್ ಮತ್ತು ಹಾಂಕಾಂಗ್ ಬೆಳ್ಳಿತೆರೆಗಳನ್ನು ಚಿಂದಿ ಉಡಾಯಿಸಿರುವ ಈ ಇಬ್ಬರು ಸೂಪರ್‌ಸ್ಟಾರ್‌ಗಳು ಒಟ್ಟಾಗಿ ನಟಿಸಿರುವ 'ಪ್ರೊಜೆಕ್ಟ್ ಎಕ್ಸ್ ಟ್ರಾಕ್ಸನ್' ಚಿತ್ರದ್ದೇ ಎಲ್ಲೆಡೆ ಮಾತು.

ಈತ ನಟ, ನಿರ್ದೇಶಕ, ನಿರ್ಮಾಪಕ, ಆ್ಯಕ್ಷನ್ ಕೊರಿಯೊಗ್ರಾಫರ್, ಸ್ಟಂಟ್‌ಮ್ಯಾನ್ ಎಲ್ಲವೂ ಹೌದು. ಜಾಕಿ ಚಾನ್ ಚಿತ್ರದ ವಿಶೇಷವೆಂದರೆ ಆತ ಖುದ್ದಾಗಿ ಸ್ಟಂಟ್‌ಗಳನ್ನು ಮಾಡುವುದು. ಅದೂ ಅಂತಿಂಥ ಸ್ಟಂಟ್‌ಗಳಲ್ಲ; ಜೀವದ ಹಂಗು ತೊರೆದು ನಿರ್ವಹಿಸುವ ಸ್ಟಂಟ್‌ಗಳು. ಇತ್ತೀಚೆಗೆ 'ವ್ಯಾನ್‌ಗಾರ್ಡ್' ಸಿನಿಮಾಕ್ಕೆ ಸಮುದ್ರದಾಳದಲ್ಲಿ ಸ್ಟಂಟ್ ಒಂದನ್ನು ನಿರ್ವಹಿಸಿದ್ದಾಗ ಇನ್ನೇನು ಜಾಕಿ ಸತ್ತೇ ಹೋದರು ಎನ್ನುವಂತಿತ್ತು ಪರಿಸ್ಥಿತಿ. ಸಮುದ್ರದಾಳದಲ್ಲಿ ದೊಡ್ಡ ಬಂಡೆಯೊಂದರ ಕೆಳಗೆ ಸಿಕ್ಕುಬಿದ್ದು ಮೇಲಕ್ಕೆ ಬರಲಾರದೆ ಒದ್ದಾಡುತ್ತಿದ್ದ ಜಾಕಿಯನ್ನು ಚಿತ್ರದ ಸಿಬ್ಬಂದಿ ತಕ್ಷಣ ಮುಳುಗಿ ರಕ್ಷಿಸಿದ್ದರು.

ಶೂಟಿಂಗ್‌ನಲ್ಲಿ ಹೀಗೆ ಪ್ರಾಣಾಪಾಯದಿಂದ ಪಾರಾಗುವುದು, ಏಟು ತಿನ್ನುವುದು ಜಾಕಿಗೆ ಹೊಸತೇನಲ್ಲ. ಐದು ದಶಕಗಳ ಸಿನಿಮಾ ಜೀವನದಲ್ಲಿ ಮೂರು ಸಲ ಮೂಗು ಒಡೆದಿದೆ, ಒಮ್ಮೆ ಮೊಣಕಾಲು ಮುರಿದಿದೆ, ಬಹುತೇಕ ಕೈಬೆರಳುಗಳು ಮುರಿದಿವೆ! ಒಮ್ಮೆ ತಲೆಬುರುಡೆಗೂ ಏಟು ಬಿದ್ದು ಸ್ಟೀಲ್ ಪ್ಲೇಟ್ ಪ್ಯಾಚ್ ಮಾಡಲಾಗಿತ್ತು. ಹಿಂದೊಮ್ಮೆ 'ಆರ್ಮರ್ ಆಫ್ ಗಾಡ್' ಚಿತ್ರದ ಶೂಟಿಂಗ್‌ನಲ್ಲಿ ಹೀಗೆಯೇ ತಲೆಗೆ ಏಟು ತಿಂದು ಇನ್ನೇನು ಸತ್ತೇಹೋದ ಸುದ್ದಿ ಬಂದಿತ್ತು. ಆದರೆ ಜಾಕಿಯದ್ದು ಗಟ್ಟಿಪಿಂಡ. ಮುಂದಿನ ಏಪ್ರಿಲ್‌ಗೆ 66ನೇ ವರ್ಷಕ್ಕೆ ಕಾಲಿಡಲಿರುವ ಜಾಕಿ, ಈಗಲೂ ಸ್ವತಃ ಸ್ಟಂಟ್‌ಗಳನ್ನು ಮಾಡುವುದು ಅಚ್ಚರಿಯೇ. ಜಾಕಿಯದ್ದು ಈಗ 'ಒನ್ ಮ್ಯಾನ್ ಇಂಡಸ್ಟ್ರಿ'. ಒಟ್ಟು ನಿವ್ವಳ ಗಳಿಕೆ 400 ದಶಲಕ್ಷ ಅಮೆರಿಕನ್ ಡಾಲರ್.

ಜಾಕಿಯ ಜೀವನವೇ ಒಂದು ಸಿನಿಮಾ ಕಥೆಯಂತಿದೆ. ಬಡ ಕುಟುಂಬ, ಓದುವ ವಯಸ್ಸಲ್ಲಿ ಮಾಡಿದ್ದು ಕೂಲಿ ಕೆಲಸ. ಈ ಮಗು ಹುಟ್ಟುವಾಗಲೇ ಶಸ್ತ್ರಚಿಕಿತ್ಸೆ ಮಾಡಬೇಕಾಗಿ ಬಂತು. ಶಸ್ತ್ರಚಿಕಿತ್ಸೆ ಮಾಡಬೇಕಿದ್ದ ವೈದ್ಯ 'ಇಂತಿಷ್ಟು ದುಡ್ಡು ಕೊಡುತ್ತೇನೆ. ಮಗುವನ್ನು ನನಗೇ ಕೊಡು' ಎಂದನಂತೆ. ಆದರೆ ಅಪ್ಪ ಒಪ್ಪಲಿಲ್ಲ. ಸಾಲ ಮಾಡಿ ದುಡ್ಡು ತಂದು ಕೊಟ್ಟು ಶಸ್ತ್ರಚಿಕಿತ್ಸೆ ಮಾಡಿಸಿದ. 8ರ ಎಳವೆಯಲ್ಲೇ ಮೊದಲ ಸಿನಿಮಾದಲ್ಲಿ ನಟನೆ. ಆದರೆ ಗುಂಪಿನಲ್ಲಿ ಒಬ್ಬ ಅಷ್ಟೆ. ಅಪ್ಪ–ಅಮ್ಮ ಮಗನನ್ನು ಹಾಂಕಾಂಗ್‌ನಲ್ಲೇ ಬಿಟ್ಟು ದೂರದ ಆಸ್ಟ್ರೇಲಿಯಾಕ್ಕೆ ಹೋಗಿ ನೆಲೆಸಿದರು. ಶಾಲೆ ಕಲಿಯಲಿಲ್ಲ, ಚಿಕ್ಕಂದಿನಲ್ಲೇ ದುಡಿಮೆ ಕಲಿತ ಜಾಕಿ. 17ರ ಹರೆಯದಲ್ಲಿ ಚೈನಾ ಡ್ರಾಮ ಅಕಾಡೆಮಿಯಿಂದ ಪದವಿ ಪಡೆದ. ಹಾಂಕಾಂಗ್ ಸಿನಿಮಾಗಳಲ್ಲಿ ಸ್ಟಂಟ್‌ಮ್ಯಾನ್ ಕೆಲಸ ಸಿಕ್ಕಿತು. 70ರ ದಶಕದಲ್ಲಿ ಬ್ರೂಸ್‌ಲೀ ಅಂದರೆ ಸೂಪರ್‌ಮ್ಯಾನ್. ಬ್ರೂಸ್‌ಲೀ ನಟಿಸಿದ 'ದಿ ಚೈನೀಸ್ ಕನೆಕ್ಷನ್', 'ಫಿಸ್ಟ್ ಆಫ್ ಫ್ಯೂರಿ', 'ಎಂಟರ್ ದಿ ಡ್ರ್ಯಾಗನ್' ಮುಂತಾದ ಜಗದ್ವಿಖ್ಯಾತ ಚಿತ್ರಗಳಲ್ಲಿ ಜಾಕಿ ಚಾನ್ ಕೂಡಾ ಇದ್ದ. ಆದರೆ ಏಟು ತಿನ್ನುವ ರೌಡಿ ಗುಂಪಿನಲ್ಲಿ ಒಬ್ಬನಾಗಿ! ಆಗ ಜಾಕಿ ಯಾರೆಂದು ಯಾರಿಗೂ ಗೊತ್ತಿರಲಿಲ್ಲ.

ಸಿನಿಮಾದ ಕೆಲಸ ಹೊಟ್ಟೆ ತುಂಬಿಸದಿದ್ದಾಗ ಆಸ್ಟ್ರೇಲಿಯಾದ ಕ್ಯಾನ್‌ಬೆರಾದಲ್ಲಿ ಕಟ್ಟಡ ನಿರ್ಮಾಣ ಕೆಲಸಕ್ಕೆ ಹೊರಟುಹೋದ ಜಾಕಿ. ಅದೊಂದು ದಿನ 'ನ್ಯೂ ಫಿಸ್ಟ್ ಆಫ್ ಫ್ಯೂರಿ' ಸಿನಿಮಾದಲ್ಲಿ ಮುಖ್ಯ ಪಾತ್ರದಲ್ಲಿ ನಟಿಸಲು ವಿಲ್ಲೀ ಚಾನ್ ಕಳಿಸಿದ ಒಂದು ಟೆಲಿಗ್ರಾಂ ಜಾಕಿಯ ಬದುಕನ್ನೇ ಬದಲಿಸಿತು. ಜಾಕಿ ತಾರೆಯಾದ ಬಳಿಕವೂ ವಿಲ್ಲೀ ಚಾನ್ ಆತನ 'ಬೆಸ್ಟ್ ಫ್ರೆಂಡ್' ಮತ್ತು ಮ್ಯಾನೇಜರ್ ಆಗಿ ಉಳಿದ.

ಬ್ರೂಸ್ ಲೀ ಸಂಶಯಾಸ್ಪದ ಸಾವಿನ ಬಳಿಕ ಜಾಕಿಗೆ ಅವಕಾಶ ಒದಗಿಬಂತು. ತನ್ನದೇ ಸ್ಟೈಲ್ ರೂಪಿಸಿಕೊಂಡ ಜಾಕಿ ಕಾಮಿಕ್ ಸ್ಟಂಟ್‌ಗಳಿಗೂ ಒತ್ತು ನೀಡಿ ಗೆದ್ದ. 1978ರ ವೇಳೆಗೆ ಆತ ಜನಪ್ರಿಯ ಸಮರಕಲೆ ತಾರೆಯಾಗಿದ್ದ. ಆತನ ನಿರ್ದೇಶನದ 'ದಿ ಯಂಗ್ ಮಾಸ್ಟರ್' ಮತ್ತು 'ಆರ್ಮರ್ ಆಫ್ ಗಾಡ್' (ನಟನೆ– ನಿರ್ದೇಶನ) 'ಮಿಸ್ಟರ್ ಕ್ಯಾಂಟನ್ ಆ್ಯಂಡ್ ಲೇಡಿ ರೋಸ್' ಚಿತ್ರಗಳು ಸೂಪರ್‌ಹಿಟ್ ಆದ ಬಳಿಕ ಸ್ವಂತ ಪ್ರೊಡಕ್ಷನ್ ಕಂಪನಿ ಸ್ಥಾಪಿಸಿದ. 'ಜಾಕಿ ಚಾನ್ ಸ್ಟಂಟ್‌ಮ್ಯಾನ್ ಅಸೋಸಿಯೇಶನ್' ಕಟ್ಟಿದ. ವೈದ್ಯಕೀಯ ನೆರವಿಗೆ ಯೋಜನೆ ರೂಪಿಸಿದ. ಮಾಡೆಲಿಂಗ್/ ಕಾಸ್ಟಿಂಗ್ ಏಜೆನ್ಸಿ ಆರಂಭಿಸಿದ. 90ರ ದಶಕದ ವೇಳೆಗೆ ಸ್ಪಾರ್ಟನ್ ಎಕ್ಸ್ ಎನ್ನುವ ಚಾನ್‌ನ ಕಾಮಿಕ್ ಬುಕ್ಸ್ ಏಷ್ಯಾ ಮತ್ತು ಅಮೆರಿಕದಲ್ಲಿ ಜನಪ್ರಿಯಗೊಂಡದ್ದು ಇತಿಹಾಸ. ಸ್ವತಃ ಸ್ಟಂಟ್‌ಗಳನ್ನು ಮಾಡುವುದು ನಿಲ್ಲಿಸಿ ಎಂದು ಜಾಕಿಗೆ ಈಗಲೂ ಹಲವರು ಸಲಹೆ ನೀಡುತ್ತಿದ್ದಾರೆ. ಆದರೆ ಜಾಕಿಯ ವಿಶಿಷ್ಟ ಮುಗುಳ್ನಗೆಯೇ ಅದಕ್ಕೆ ಉತ್ತರ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65